# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **03** |
| ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.12.2021 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

*****

| | ಪ್ರಶ್ನೆ | ಉತ್ತರ |
|---|---|---|
| ಅ) | 2019-20ರ ಸಾಲಿನಲ್ಲಿ ಹೆಸ್ಕಾಮ್, ಜೆಸ್ಕಾಮ್ ಮತ್ತು ಸೆಸ್ಕಾಮ್‌ಗಳು ಅನುಭವಿಸಿದ ನಷ್ಟ ಎಷ್ಟು; (ಕಾರಣಗಳೊಂದಿಗೆ ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು ರೂ.366.63 ಕೋಟಿಗಳಷ್ಟು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ರೂ.682.21 ಕೋಟಿಗಳಷ್ಟು ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ರೂ.992.277 ಕೋಟಿಗಳಷ್ಟು ನಷ್ಟವನ್ನು ಅನುಭವಿಸಿವೆ ಹಾಗೂ ನಷ್ಟದ ಪ್ರಮುಖ ಕಾರಣಗಳು ಈ ಕೆಳಕಂಡಂತಿದೆ.<br>1) ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹೊಸ ಉಷ್ಣಕೇಂದ್ರ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ತನ್ನು ಖರೀದಿಸಬೇಕಾಗಿರುವುದರಿಂದ, ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.<br>2) ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಉಷ್ಣಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗುತ್ತದೆ.<br>3) ಕಾರ್ಯ ಮತ್ತು ನಿರ್ವಹಣೆ ಹಾಗೂ ಬಂಡವಾಳ ವೆಚ್ಚಕ್ಕಾಗಿ ಪಡೆಯುವ ಸಾಲದ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇವೆ.<br>4) ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ಮಾರಾಟದಿಂದ ಬರುತ್ತಿರುವ ವ್ಯತ್ಯಾಸವು ಹೆಚ್ಚಾಗುತ್ತಿದೆ.<br>5) ನೌಕರರ ಸಂಬಳದ ಪರಿಷ್ಕರಣೆ, ಕಾರ್ಯ ಮತ್ತು ನಿರ್ವಹಣೆ ವೆಚ್ಚ, ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ ವೆಚ್ಚಗಳು.<br>6) ಸಕಾಲದಲ್ಲಿ ನಗರಸಭೆ/ಪುರಸಭೆ/ಗ್ರಾಮ ಪಂಚಾಯ್ತಿಗಳಿಗೆ ಸಂಬಂಧಿಸಿದ ಬೀದಿ ದೀಪ ಮತ್ತು ನೀರು ಸರಬರಾಜು ಸ್ಥಾವರಗಳಿಂದ ವಿದ್ಯುತ್ ಬಾಕಿ ಮೊತ್ತಗಳು ಪಾವತಿಯಾಗದಿರುವುದರಿಂದ, ವಿದ್ಯುತ್ ಖರೀದಿ ವೆಚ್ಚ ಭರಿಸಲು ಬ್ಯಾಂಕಿನಿಂದ ಸರಾಸರಿ ಶೇ.11 ರಂತೆ ಬಡ್ಡಿ ಮೇರೆಗೆ ಸಾಲ ಪಡೆದು ಪಾವತಿಸಬೇಕಾಗಿರುವುದು ಹಿನ್ನಡೆಗೆ ಕಾರಣವಾಗಿದೆ.<br>7) ಬಿಜೆ/ಕೆಜೆ ಮತ್ತು ಐಪಿ ಸ್ಥಾವರಗಳ ಸಬ್ಸಿಡಿ ಮೊತ್ತವು ಸರ್ಕಾರದಿಂದ ಬೇಡಿಕೆಗನುಗುಣವಾಗಿ ಸಕಾಲದಲ್ಲಿ ಬಿಡುಗಡೆಯಾಗದಿರುವುದು.<br>8) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2017-18 ರಲ್ಲಿ ಆದಾಯವೆಂದು ಪರಿಗಣಿಸಿ ಅವಕಾಶ ಕಲ್ಪಿಸಲಾದ ನಿಯಂತ್ರಣ ಆಸ್ತಿ (Regulatory Asset) ರೂ.837.03 ಕೋಟಿಯನ್ನು 2019-20 ರಲ್ಲಿ ರಿವರ್ಸ್ (ವೆಚ್ಚವೆಂದು ಪರಿಗಣಿಸಿ) ಮಾಡಲಾದ ಕಾರಣ ನಷ್ಟವನ್ನು ಅನುಭವಿಸಲಾಗಿದೆ. |

....2

| | | |
|---|---|---|
| ಆ) | 2019-20ನೇ ಸಾಲಿನಲ್ಲಿ ಹೆಸ್ಕಾಮ್ ಜೆಸ್ಕಾಮ್ ಮತ್ತು ಸೆಸ್ಕಾಮ್‌ಗಳಿಗೆ ಸರ್ಕಾರವು ಹೂಡಿಕೆ ಮಾಡಿದ ಮೊತ್ತ ಎಷ್ಟು; ಈ ಹೂಡಿಕೆಯನ್ನು ಯಾವ ಯಾವ ವಿಷಯಗಳಿಗೆ / ಕಾರ್ಯಗಳಿಗೆ ಬಳಸಿಕೊಳ್ಳಲಾಗಿದೆ; (ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಹೆಸ್ಕಾಂ, ಜೆಸ್ಕಾಂ ಮತ್ತು ಸೆಸ್ಕಾಂ ಗಳಿಗೆ ಸರ್ಕಾರವು ಹೂಡಿಕೆ ಮಾಡಿದ ಮೊತ್ತದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಹೆಸ್ಕಾಮ್, ಜೆಸ್ಕಾಮ್ ಮತ್ತು ಸೆಸ್ಕಾಮ್‌ಗಳು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೊತ್ತದ ಹೂಡಿಕೆಯನ್ನು ಪಡೆದುಕೊಂಡಿವೆ; ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಬಿಲ್ಲಿನ ಮೂಲಕ ಸಂಗ್ರಹಿಸಲಾದ ಮೊತ್ತ ಎಷ್ಟು? | ಕಳೆದ ಮೂರು ವರ್ಷಗಳಲ್ಲಿ ಸೆಸ್ಕ್, ಹೆಸ್ಕಾಂ ಮತ್ತು ಜೆಸ್ಕಾಂ ಕಂಪನಿಗಳಲ್ಲಿ ಸರ್ಕಾರವು ಹೂಡಿಕೆ ಮಾಡಿದ ಕಂಪನಿವಾರು ವಿವರಗಳು ಕೆಳಕಂಡಂತಿವೆ:- (see table 1 below); ಕಳೆದ ಮೂರು ವರ್ಷಗಳಲ್ಲಿ ಸೆಸ್ಕ್, ಹೆಸ್ಕಾಂ ಮತ್ತು ಜೆಸ್ಕಾಂ ಕಂಪನಿಗಳಲ್ಲಿ ವಿದ್ಯುತ್ ಬಿಲ್ಲಿನ ಮೂಲಕ ಸಂಗ್ರಹಿಸಲಾದ ಮೊತ್ತದ ವಿವರ ಕೆಳಕಂಡಂತಿದೆ. (see table 2 below) |

| ಕಂಪನಿ ಹೆಸರು | 2018-19 | 2019-20 | 2020-21 | 2021-22 (ನವೆಂಬರ್ 21 ರ ಅಂತ್ಯಕ್ಕೆ) |
|---|---|---|---|---|
| ಸೆಸ್ಕ್ | 249.41 | 155.23 | 55.74 | 12.54 |
| ಹೆಸ್ಕಾಂ | 142.82 | 205.62 | 275.97 | 14.60 |
| ಜೆಸ್ಕಾಂ | 154.46 | 193.12 | 112.25 | 18.13 (ಅಕ್ಟೋಬರ್ 21ರ ಅಂತ್ಯಕ್ಕೆ) |

(ರೂ ಕೋಟಿಗಳಲ್ಲಿ)

| ಕಂಪನಿ ಹೆಸರು | 2018-19 | 2019-20 | 2020-21 | 2021-22 (ಅಕ್ಟೋಬರ್ 21 ರ ಅಂತ್ಯಕ್ಕೆ) |
|---|---|---|---|---|
| ಸೆಸ್ಕ್ | 3651.57 | 3772.31 | 3880.01 | 2672.45 |
| ಹೆಸ್ಕಾಂ | 8066.65 | 7501.40 | 7748.57 | 5021.20 |
| ಜೆಸ್ಕಾಂ | 5078.44 | 5113.10 | 5178.81 | 3021.58 |

ಸಂಖ್ಯೆ: ಎನರ್ಜಿ 262 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

# ಅನುಬಂಧ

**2019-20ನೇ ಸಾಲಿನಲ್ಲಿ ಸೆಸ್ಕ್, ಹೆಸ್ಕಾಂ ಮತ್ತು ಜೆಸ್ಕಾಂ ಗಳಿಗೆ ಸರ್ಕಾರವು ಹೂಡಿಕೆ ಮಾಡಿದ ಮೊತ್ತದ ವಿವರಗಳು:-**

ಸೆಸ್ಕ್ (ರೂ ಕೋಟಿಗಳಲ್ಲಿ)

| ಕ್ರ. ಸಂ. | ವಿವರ | **2019-20** |
|---|---|---|
| 1 | ಡಿಡಿಯುಜಿಜೆವೈ | 21.16 |
| 2 | ಐ.ಪಿ.ಡಿ.ಎಸ್ | 29.77 |
| 3 | ಸೌಭಾಗ್ಯ | 6.7 |
| 4 | ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) | 7 |
| 5 | ಗಿರಿಜನ ಉಪಯೋಜನೆ (ಟಿ.ಎಸ್.ಪಿ) | 1 |
| 6 | ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) | 25.6 |
| 7 | ಇತರೆ ಕೆಪೆಕ್ಸ್ ಕಾಮಗಾರಿಗಳಿಗೆ | 64 |
| | **ಒಟ್ಟು** | **155.23** |

**ಹೆಸ್ಕಾಂ**

| ಕ್ರ. ಸಂ. | ವಿವರ | ಮೊತ್ತ |
|---|---|---|
| 1 | ಬಂಡವಾಳ ಹೂಡಿಕೆ | 156.00 |
| 2 | ವಿಶೇಷ ಅಭಿವೃದ್ಧಿ ಯೋಜನೆ | 37.29 |
| 3 | ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ | 12.33 |
| | **ಒಟ್ಟು** | **205.62** |

**ಜೆಸ್ಕಾಂ**

| ಕ್ರ. ಸಂ. | ವಿವರ | ಮೊತ್ತ |
|---|---|---|
| **1** | ಬಂಡವಾಳ ಹೂಡಿಕೆ | 104.06 |
| **2** | ವಿಶೇಷ ಅಭಿವೃದ್ಧಿ ಯೋಜನೆ | 76.56 |
| **3** | ಪರಿಶಿಷ್ಟ ಜಾತಿ ಉಪಯೋಜನೆ | 10.00 |
| **4** | ಗಿರಿಜನ ಉಪಯೋಜನೆ | 2.50 |
| | **ಒಟ್ಟು** | **193.12** |